ತೀರಾ ಮರೆಯಲಾರದ ಅನುಭವ ಮಾತ್ರ ಅವಳನ್ನು ಹಣ್ಣಾಗಿಸಿದ್ದು ಎಲ್ಲ ಹೇಳಿದಳು. ಆ ಕಥೆಯನ್ನು ಹೇಳುತ್ತ ಹೇಳುತ್ತ ಅವನ ಕಂಠವೇ ಗದ್ಗದವಾಗಿತ್ತು.

ಎಲ್ಲ ಹೆಂಗಸರೇ ಇದ್ದ ಆ ಆಶ್ರಮದಲ್ಲಿ ಅವರಂತೆಯೇ ಕಾವಿ ಬಟ್ಟೆಯುಟ್ಟುಕೊಂಡು ತಾನೂ ಜೀವನವಿಡೀ ಕಳೆದುಬಿಡೋಣ ಎಂದು ಅಲ್ಲಿಗೆ ಹೋದ ಆಕೆಗೆ ಮೊದಲಿನ ಒಂದೆರಡು ತಿಂಗಳು ಎಲ್ಲ ಸಮವಾಗಿತ್ತು. ಬೆಳಿಗ್ಗೆ ಮತ್ತು ಸಂಜೆ ಪ್ರಾರ್ಥನೆ ಮಾಡುವಾಗ ಮತ್ತು ನಡುವೆ ಅವರೊಂದಿಗೆ ಅಡುಗೆಯನ್ನೂ ಸೇರಿ ಆಶ್ರಮದ ಎಲ್ಲ ಕೆಲಸಗಳನ್ನು ಮಾಡಿಕೊಂಡು ಹೋಗುವಾಗ ಒಳ್ಳೆಯ ಜಾಗವನ್ನೇ ಸೇರಿದೆ ಎಂದು ಪದೇ ಪದೇ ಅಂದುಕೊಂಡದ್ದೂ ಹೌದು. ಅದನ್ನೇ ಆಗಷ್ಟೇ ಸ್ನೇಹಿತರಾಗಿದ್ದ ಆ ಮಂದಿಯೊಂದಿಗೆ ಹೇಳಿಕೊಳ್ಳುವಾಗ ಕೆಲವರು ಮುಸಿ ಮುಸಿ ನಕ್ಕದ್ದು ಅರ್ಥವಾಗಲು ಆಕೆ ಇನ್ನೆರಡು ತಿಂಗಳೇ ಕಾಯಬೇಕಾಯ್ತು.

ವಾರದ ದಿನಗಳಲ್ಲಿ ಬೆಳಿಗ್ಗೆ ಸಂಜೆ ಪ್ರಾರ್ಥನೆ ಮಾಡುತ್ತ ರಾತ್ರಿಯೂ ಏನೇನೋ ಓದುತ್ತ ಕಾಲ ಕಳೆಯುವ ಆ ಹೆಂಗಸರು ವಾರಾಂತ್ಯದಲ್ಲಿ ಮಾತ್ರ ಆಶ್ರಮದಲ್ಲಿ ಇರುತ್ತಲೇ ಇರಲಿಲ್ಲ. ಒಂದಿಷ್ಟು ವಾರಗಳ ಕಾಲ ಅದನ್ನು ಗಮನಿಸಿದ ಆಕೆ ಒಮ್ಮೆ ಕುತೂಹಲ ತಾಳದೆ ಕೇಳಿದರೆ 'ಹೊರಗಡೆ ದೇವಸ್ಥಾನಗಳಲ್ಲಿ, ಮತ್ತು ಊರಿನ ಕೆಲ ಹಿರಿಯರ ಮನೆಯಲ್ಲಿ ಸಾಮೂಹಿಕ ಪ್ರಾರ್ಥನೆಯ ಸಲುವಾಗಿ' ಎನ್ನುವ ಉತ್ತರ ಬಂದಿತ್ತು.

'ನಾನೂ ಬರಬಹುದೇ' ಎನ್ನುವುದಕ್ಕೆ ಅವರಲ್ಲಿ ಬಹಳಷ್ಟು ಮಂದಿ ಸುಮ್ಮನೇ ನಕ್ಕಿದ್ದರಷ್ಟೇ ವಿನಃ ಉತ್ತರ ಕೊಟ್ಟಿರಲಿಲ್ಲ. ಯಾರೋ ಹಿಂದಿನಿಂದ ಹೇಳಿದ್ದರು. 'ಇನ್ನೂ ಸ್ವಲ್ಪ ದಿನ ತಡೆದುಕೋ. ಆಮೇಲೆ ಬರುವಿಯಂತೆ...'

ಆದರೂ ಕುತೂಹಲ ತಡೆಯಲಾರದೇ ಆಕೆ ಒಂದು ವಾರಾಂತ್ಯಕ್ಕೆ ಗುಂಪು ಗುಂಪಾಗಿ ಆಶ್ರಮದ ಗೇಟನ್ನು ದಾಟಿ ಹೋಗುತ್ತಿದ್ದ ಅವರನ್ನು ಹಿಂಬಾಲಿಸಿದ್ದಳು. ಅವರದೇ ತರಾತುರಿಯಲ್ಲಿದ್ದ ಯಾರೂ ಆಕೆ ಹಿಂಬಾಲಿಸಿ ಬಂದುದನ್ನು ಗಮನಿಸಿಯೂ ಇರಲಿಲ್ಲ. ಗೇಟಿನ ಹೊರಗೆ ಬಂದವಳಿಗೆ ಆದ ಆಘಾತ ಮಾತ್ರ ಅವಳನ್ನು ಹಣ್ಣಾಗಿಸಿತ್ತು. ಸಾಲು ಸಾಲಾಗಿ ನಿಂತ ಕಾರುಗಳನ್ನು ಹತ್ತಲು ಆ ಸನ್ಯಾಸಿನಿಯರು ಪೈಪೋಟಿ ನಡೆಸಿದ್ದರು. ಕಾರಿನ ಒಳಗಡೆ ಕುಳಿತಿದ್ದವರು ಈ ಸನ್ಯಾಸಿನಿಯರಲ್ಲಿ ತುಸು ವಯಸ್ಸಾದವರನ್ನು ಮತ್ತು ಅಷ್ಟೊಂದು ಚಂದವಿಲ್ಲದವರನ್ನು ತಳ್ಳುತ್ತ ಕಡಿಮೆ ವಯಸ್ಸು ಮತ್ತು ಚೂರು ಬೆಳ್ಳಗಿದ್ದವರನ್ನು ಒಳಗೆ ಎಳೆದುಕೊಂಡು ಬಾಗಿಲು ಹಾಕಿಕೊಂಡು ಓಡುತ್ತಿರುವುದನ್ನು ಕಂಡಳು. ಅವರಿಂದ ಹಾಗೆ ತಳ್ಳಿಸಿಕೊಂಡವರು ಇನ್ನೊಂದು ಕಾರಿನೆಡೆಗೆ ಓಡುತ್ತಿರುವುದನ್ನೂ ನೋಡಿದಳು. ಹಿಂದೆಲ್ಲ ಇವಳ ಮಾತಿಗೆ ಮಂದಿ ಮುಸಿ ಮುಸಿ ನಕ್ಕದ್ದು ಈಗ ಅರ್ಥವಾಗಿತ್ತು. ಹಾಗೆ ನಕ್ಕವರೂ ಇದ್ದರು ಆ ಗುಂಪಿನಲ್ಲಿ. ಮತ್ತೆ ಹಿಂದೆ ಮುಂದೆ ನೋಡಲಿಲ್ಲ ಅವಳು. ಅದೇ ಕ್ಷಣ ಆ ಆಶ್ರಮವನ್ನೂ ಬಿಟ್ಟು ನಡೆದಿದ್ದಳು.

ಎರಡು ದಿನ ಎರಡು ರಾತ್ರಿ ನಡೆದು ಈ ಪಟ್ಟಣಕ್ಕೆ ಬಂದಿದ್ದಳು. ವರ್ಷಗಳ ಹಿಂದೆ ಊರು ಬಿಡುವಾಗ ಆ ಹಣವಂತನ ಜೇಬಿನಿಂದ ಸೆಳೆದುಕೊಂಡ ಹಣ ಖಾಲಿಯಾಗಿ ಯಾವುದೋ ಕಾಲವಾಗಿತ್ತು. ನಡು ನಡುವೆ ತುಸು ಸಂಪಾದನೆಯಾದರೂ ಅದು ಅಲ್ಲಿಂದಲ್ಲಿಗೇ ಆಗುತ್ತಿತ್ತು. ಈಗಂತೂ ಖಾಲಿ ಕೈ. ಅಂತಹವಳಿಗೆ ದಾರಿಯುದ್ದಕ್ಕೂ ಬೇಡಿದಾಗ ಸಿಕ್ಕಿದರೆ ಊಟ. ಅದಿಲ್ಲದಿದ್ದರೆ ಬರೀ ನೀರು. ಅಂತೂ ಪಟ್ಟಣಕ್ಕೆ ಬರುವಾಗ ಸೋರೆಕಾಯಿಯಂತೆ ಊದಿದ ಕಾಲುಗಳು. ಸರಿಯಾಗಿ ಊಟವಿಲ್ಲದೆ ಸೊರಗಿದ ಮೈ. ಗುಳಿಬಿದ್ದ ಕಣ್ಣುಗಳು. ಆಕೆಯ ಅವಸ್ಥೆಯನ್ನು ನೋಡಿ ಕನಿಕರಿಸಿದ ಈ ಅನಾಥಾಶ್ರಮದವರು ಆಶ್ರಯ ಕೊಟ್ಟಿದ್ದರು. ಇಲ್ಲಿಯೂ ಏನೇನು ನೋಡಬೇಕಾಗುತ್ತದೋ ಎಂದು ಹೆದರಿಯೇ ಸೇರಿದ ಅವಳಿಗೆ ಹೇಳಿದ್ದರು. 'ಆರೋಗ್ಯ ಸರಿಯಾದಾಕ್ಷಣ ದುಡಿದು ತೀರಿಸಬೇಕು;